| | | | |
|---|---|---|---|
| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
| ಸಿಸಿ ನಂ. 299/2017 | | | |
| ಸಾಕ್ಷಿದಾರರ ಹೆಸರು | ಪಾಪಣ್ಣ | | |
| ತಂದೆ ಹೆಸರು | ನರಸಿದಹಪ್ಪ | ಪಿಡಬ್ಲ್ಯೂ: | 6 |
| ವಯಸ್ಸು | 61 ವರ್ಷ | ಸಿಡಬ್ಲ್ಯೂ: | 7 |
| ಉದ್ಯೋಗ | ನಿವೃತ್ತ ಪಿ ಎಸ್ ಐ | ಪ್ರಮಾಣ ವಚನ | |
| ವಾಸ ಸ್ಥಳ | ಬೆಂಗಳೂರು | ಭೋದಿಸಿದ ದಿನಾಂಕ | 27-07-2023 |

ಮುಖ್ಯ ವಿಚಾರಣೆ: ಮಾನ್ಯ ಸ. ಸ. ಅ. ರವರಿಂದ:

ನಾನು 17-07-15 ರಿಂದ ದಿ:11-09-16 ರವರೆಗೆ ಪಿ ಎಸ್ ಐ ಆಗಿ ಚಿಂತಾಮಣಿ ನಗರ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 19-08-15 ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸ- 8 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರಿಸಿರುತ್ತೇನೆ. ದಿ:02-12-15 ರಂದು ಪ್ರಕರಣದ ಆರೋಪಿ ಮುನಿಯಪ್ಪನವರು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಹಾಜರಾಗಿದ್ದು ಸೂಕ್ತ ಜಾಮೀನು ಪಡೆದು ಬಿಡಗಡೆ ಮಾಡಿರುತ್ತೇನೆ. ಆರೋಪಿ ಕಡೆಯಿಂದ ಚಾಸ-1 ರವರ ಸಂಬಂದಿಸಿದಂತೆ ಚೆಕ್ ನಂ. 660113, 660120 ರವರೆಗೆ ಸುಮಾರು 8 ಚೆಕ್ ಗಳನ್ನು ಪಡೆದುಕೊಂಡು ಪಂಚರಾದ ವೇಮಣ್ಣ ಮತ್ತು ರಾಮಚಂದ್ರ ರೆಡ್ಡಿ ರವರ ಸಮಕ್ಷಮ ಚೆಕ್ ಗಳನ್ನು ಅಮಾನತ್ ಪಡಿಸಿಕೊಂಡು ಸ್ವತ್ತಿನ ಪಟ್ಟಿಯನ್ನು ಬರಾಯಿಸಿರುತ್ತೇನೆ. ವರ್ಗಾವಣೆಯಾದ್ದರಿಂದ ಮುಂದಿನ ತನಿಖೆಗೆ ಕಡತವನ್ನು ಚಾಸ-9 ರವರಿಗೆ ನೀಡಿರುತ್ತೇನೆ.

ಅಮಾನತ್ ಪಂಚನಾಮೆಯನ್ನು ಹಾಜರುಪಡಿಸಿದ್ದು, ಅದನ್ನು ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಅದರ ಮೇಲಿನ ಸಾಕ್ಷಿಯ ಸಹಿಯನ್ನು

ನಿಪಿ-6 (ಎ) ಎಂದು ಗುರುತಿಸಲಾಯಿತು.  660113,  ರಿಂದ 660120 ಚೆಕ್ ಪುಸ್ತಕದಲ್ಲಿನ 8 ಚೆಕ್ ಪ್ರತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ- ನಿಪಿ-7  ಎಂದು ಗುರುತಿಸಲಾಯಿತು.  ನಿಪಿ-6 ಅಮಾನತ್ ಪಂಚನಾಮೆಯಲ್ಲಿ ಇರುವ ಸಾಕ್ಷಿದಾರರನ್ನು ಸಾಕ್ಷಿದಾರರನ್ನಾಗಿ ದೋಷಾರೋಪಣೆ ಪಟ್ಟಿಲ್ಲಿಯಲ್ಲಿ ಕಾಣಿಸಿರುವ ಬಗ್ಗೆ ಕಂಡುಬಂದಿರುವುದಿಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಬಿ ಆರ್ ಎಸ್ ವಕೀಲರಿಂದ

ನಿಪಿ-6 ರಲ್ಲಿ ನಮೂದಿಸಿರುವ ದಿನಾಂಕ ಗಳು ತಿದ್ದುಪಡಿಯಾಗಿದೆ ಎಂದರೆ ಸರಿ. ಅದನ್ನು ತಿದ್ದುಪಡಿಮಾಡಲಾಗಿದೆ ಅಂತ ಹೇಳಿ ಸಾಕ್ಷಿದಾರರನ್ನಾಗಿ ಮಾಡಲಾರಿಗಿರುವುದಿಲ್ಲ ಎಂದರೆ ಸರಿಯಲ್ಲ.  ಆರೋಪಿಯಿಂದ ಖಾಲಿ ಹಾಳೆಗೆ ಸಹಿ ಪಡೆದುಕೊಂಡು ಅದನ್ನು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-7 ಚೆಕ್ ಪುಸ್ತಕದ ಪ್ರತಿಗಳನ್ನು ಚಾಸ-1 ರವರು ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ.  ಆರೋಪಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ.  ದೂರು ನೀಡಿದ ತಕ್ಷಣ ಆರೋಪಿಯನ್ನು ಏಕೆ ದಸ್ತಗಿರಿ ಮಾಡಿರುವುದಿಲ್ಲ ಎಂಬ ಬಗ್ಗೆ ನಿಮ್ಮ ತನಿಖೆಯ ವೇಳೆಯಲ್ಲಿ ಕೇಳಿರುತ್ತೀರಾ ಎಂದರೆ ಸಾಕ್ಷಿಯು ಹಿಂದಿನ ತನಿಖಾಧಿಕಾರಿ ವರ್ಗಾವಣೆಯಾಗಿದ್ದು ನಾನು ಕಡತವನ್ನು ಪಡೆದುಕೊಂಡಿದ್ದು ಅಷ್ಟರಲ್ಲಿ ಆರೋಪಿ ಜಾಮೀನು ಪಡೆದು ಹಾಜರಾಗಿರುತ್ತಾರೆ. ಚಾಸ-1 ರವರಿಗೆ ಸಹಾಯ ಮಾಡಲು ನಿಪಿ-6 ಪಂಚನಾಮೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಬಡ್ಡಿ ನಿಷೇದ ಕಾಯ್ದೆ  ಅಡಿಯಲ್ಲಿ ಪ್ರಕರಣ ದಾಖಲು ಮಾಡಲು ನಿಮಗೆ ಅಧಿಕಾರ ವ್ಯಾಪ್ತಿ ಇರುವುದಿಲ್ಲ ಎಂದರೆ ದೋಷಾರೋಪಟ್ಟಿ ನಾನು ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

Accused present. Cw7 is present, examined as pw6 got marked Ex.6,6(a), 7.

Issue NBW to PW3 and Issue summons to Cw8 and 9.

For evidence.
Call on 10-08-2023.

**Prl. C.J & JMFC.,**
**Chintamani.**